## ವಾರದ ಪತ್ರ

## ಕೊರೊನಾ ಪ್ರಭಾವ

ಇತ್ತೀಚಿನ ದಿನಗಳಲ್ಲಿ ಶಾಲೆಗೆ ರಜೆ ಬಂತೆಂದರೆ ಸಾಕು, ಬೇಸಿಗೆ ಶಿಬಿರ ಎಂದು ಮಕ್ಕಳಿಗೆ ಅಸಾಧ್ಯ ಕೆಲಸಗಳನ್ನೂ ಹೇರಲಾಗುತ್ತಿತ್ತು. ಆದರೂ ಬಿಸಿಲೆನ್ನದೆ ಇಡೀ ದಿನ ಹೊರಗಡೆ ಆಡುತ್ತಿದ್ದರು. ಈಗ ಕೊರೊನಾ ಭಯ ಎಲ್ಲೆಲ್ಲೂ ಆವರಿಸಿಕೊಂಡು ಶೇ. 90 ರಷ್ಟು ಜನರನ್ನಾದರೂ ಮನೆಯಲ್ಲೇ ಕೂರುವಂತೆ ಮಾಡಿದೆ. ಹೀಗೆ ಮನೆಯಲ್ಲೇ ಕುಳಿತವರಿಗೆ ಸಮಯ ಕಳೆಯಲು ಟೀವಿ ಹಾಕಿದರೆ ಸಾಕು ಕೊರೊನಾದ ಸೋಂಕು, ಸಾವು ನೋವು, ಹರಡುವಿಕೆ ಬಗ್ಗೆ ಎಲ್ಲಾ ಸುದ್ದಿವಾಹಿನಿ ಮತ್ತು ಸಾಮಾಜಿಕ ಮಾಧ್ಯಮಗಳು ತೋಚಿದ್ದನ್ನೆಲ್ಲಾ ಬಿತ್ತರಿಸುತ್ತಿವೆ. ಒಂದು ರೀತಿಯ ಭೀಭತ್ಸ ವಾತಾವರಣವೇ ಸೃಷ್ಟಿಯಾದಂತೆ ಭಾಸವಾಗುತ್ತದೆ.

ಇಂಥ ಸನ್ನಿವೇಶದಲ್ಲಿ ದೂರದರ್ಶನದ ರಾಷ್ಟ್ರೀಯ ವಾಹಿನಿಗಳು ರಾಮಾಯಣ, ಮಹಾಭಾರತವನ್ನು ಮರುಪ್ರಸಾರ ಮಾಡುತ್ತಿರುವುದು ಸಂತೋಷದ ವಿಷಯ. ನಮ್ಮ ಮಹಾಕಾವ್ಯ ಮತ್ತು ಪುರಾಣದ ಕಥೆಗಳನ್ನು ಮಕ್ಕಳು ತಿಳಿಯಲು ಸಹಾಯವಾಗುತ್ತದೆ. ಮಕ್ಕಳಿಗೆ ಮಾತ್ರವಲ್ಲದೆ, ನಮ್ಮಂತವರು 30 ವರ್ಷಗಳಷ್ಟು ಹಿಂದೆ ಸಾಗುವಂತೆ ಆಗಿದೆ. ಮನೆಯ ಸದಸ್ಯರೆಲ್ಲರೂ ಒಟ್ಟಿಗೇ ಕುಳಿತು ವೀಕ್ಷಿಸುತ್ತಿದ್ದ ಈ ಪುರಾಣ ಕಥೆಗಳು ಮತ್ತೊಮ್ಮೆ ನೆನಪಾಗುತ್ತಿದೆ. ಕೊರೊನಾ ವೈರಸ್‌ನ ಬೇಗೆಯಲ್ಲಿ ಗೃಹ ಬಂಧನದಲ್ಲಿರುವ ಎಲ್ಲರಿಗೂ ಮಹಾಕಾವ್ಯಗಳ ಮರುಪ್ರಸಾರ ಮನಸ್ಸಿಗೆ ತಂಪನ್ನೆರೆಯುತ್ತಿದೆ.

—ಪುಷ್ಪ ಎನ್.ಕೆ.ರಾವ್, ಉಡುಪಿ

## ಮುಗಿಯುವ ಹಂತದಲ್ಲಿ

ಕಲರ್ಸ್ ಸೂಪರ್‌ನಲ್ಲಿ ಪ್ರಸಾರವಾಗುವ 'ಮಗಳು ಜಾನಕಿ' ಈಗೀಗ ಭಾವನಾತ್ಮಕ ಸನ್ನಿವೇಶಗಳನ್ನೇ ತೋರಿಸುತ್ತಿದೆ. ಜಾನಕಿ ತನ್ನ ಹುಟ್ಟಿನ ಬಗ್ಗೆ ತಿಳಿದುಕೊಳ್ಳುವ ಉತ್ಸಾಹದಲ್ಲಿದ್ದು ಸಿಎಸ್ಪಿ, ದೇವಕಿ ಅಮ್ಮನವರ ಸಾಂತ್ವನ ಅವಳ ಪ್ರಕ್ಷುಬ್ಧ ಮನಸ್ಸನ್ನು ಕೊಂಚ ಸಾಂತ್ವನಗೊಳಿಸುವಲ್ಲಿ ಯಶಸ್ವಿಯಾಗಿದೆ. ಈ ಮಧ್ಯೆ ಅಭಿಜ್ಞಾ ತನ್ನನ್ನು ಮದುವೆಯಾಗುವ ಹುಡುಗ ಹಾಗೂ ತಾಯಿಯನ್ನು ಕಳೆದುಕೊಂಡ ಬಗೆಯನ್ನು ನಿರಂಜನನಿಗೆ ವಿವರಿಸಿದ ಸನ್ನಿವೇಶವಂತೂ ರೋಮಾಂಚಕ. ಕಥೆ ಮುಗಿಯುವ ಲಕ್ಷಣ ಗೋಚರಿಸುತ್ತಿದೆ. ಎಲ್ಲರ ಅಭಿನಯ ಮನೋಜ್ಞವಾಗಿದೆ. ಆಗಾಗ ಆನಂದ ಬೆಳಗೂರ್, ಶೀಲಾ ಭೂಷಣ ಅವರ ಅಭಿನಯವನ್ನೂ ತೋರಿಸಿ. ಭಾರ್ಗಿ ಅಭಿನಯ ಎಂದಿಗೂ ಅದ್ಭುತ.

—ಗೌರೀಶ ಹೆಗಡೆ ಬೆಂಗಳೂರು

## ವಾರಕ್ಕೊಮ್ಮೆ ನೋಡಿದರೆ ಸಾಕು

'ಮಗಳು ಜಾನಕಿ' ಧಾರಾವಾಹಿ ಹತ್ತರ ಕೂಡೆ ಹನ್ನೊಂದು ಅನ್ನೋಥರ ಆಗಿದೆ. ನಾನಂತೂ ಒಂದುವಾರ ಪೂರ್ತಿ ಧಾರಾವಾಹಿ ನೋಡದೇ ಶುಕ್ರವಾರ ಒಮ್ಮೆ ಮಾತ್ರ ನೋಡುತಿದ್ದೇನೆ. ಏಕೆಂದರೆ ಅಲ್ಲಿ ಒಂದು ವಾರ ಕಾಲ ಏನೇನು ನಡೆಯಿತು ಅನ್ನೋದು ಅರ್ಥ ಆಗಿಬಿಡುತ್ತೆ. ಅಷ್ಟೊಂದು ನಿಧಾನಗತಿ 'ಮಗಳು ಜಾನಕಿ'ಗೆ ಇದೆ. ಕೆಲವೊಮ್ಮೆ ಇದು ಧಾರಾವಾಹಿಯೋ ಅಥವಾ ವಾರ್ತಾವಾಹಿನಿಯೋ ಎಂಬ ಅನುಮಾನ ಬಂದದ್ದೂ ಇದೆ. ಏಕೆಂದರೆ ಒಂದೇ ವಿಷಯವನ್ನು ಬೇರೆ ಬೇರೆ ಪಾತ್ರಗಳಿಂದ ಪದೇ ಪದೇ ಹೇಳಿಸುವುದು ಅತಿ ಎನಿಸುತ್ತಿದೆ.

ಬಹಳ ನಿರೀಕ್ಷೆಯಿಂದ ನೋಡುತ್ತಿದ್ದ ಹಲವು ಪ್ರೇಕ್ಷಕರಿಗೆ ನಿರಾಶೆಯಾಗಿದೆ. ಇನ್ನು ಮೇಲಾದರೂ ಬಹುಜನರ ಅಪೇಕ್ಷೆಯಂತೆ ರೂಪುಗೊಳ್ಳಲಿ.

—ಎನ್. ಎಂ. ವಿವೇಕ್, ಶಿವಮೊಗ್ಗ

## ನೆನಪಿನ ಬುತ್ತಿ

ದೂರದರ್ಶನದಲ್ಲಿ ಪ್ರಖ್ಯಾತ ಧಾರಾವಾಹಿಗಳ ಮರುಪ್ರಸಾರ ನನ್ನ ನೆನಪಿನ ಬುತ್ತಿಯನ್ನು ಬಿಚ್ಚಿಟ್ಟಿತು. ಎಷ್ಟು ಸುಂದರವಾಗಿತ್ತು ನಮ್ಮ ಬಾಲ್ಯದ ಜೀವನ. ಇಂದು ಒಂದೇ ಮನೆಯಲ್ಲಿ ನಾಲ್ಕು ಟೀವಿ, ಅಂದು ನಾಲ್ಕು ಮನೆಗಳಿಗೆ ಒಂದೇ ಟೀವಿ. ಇಂದು ಮನೆ ಮಂದಿ ಒಟ್ಟಿಗೆ ಕೂಡಿ ಟೀವಿ ನೋಡುವುದು ಅಪರೂಪ, ಅಂದು ಅಕ್ಕ ಪಕ್ಕದ ಮನೆಯವರೆಲ್ಲ ಸೇರಿ ಶುಕ್ರವಾರದ ಚಿತ್ರಮಂಜರಿಗಾಗಿ ಭಾನುವಾರದ ಚಲನಚಿತ್ರಕ್ಕಾಗಿ ಕಾಯುತ್ತಿದ್ದೆವು.

ಅಂದಿನ ಧಾರಾವಾಹಿಗಳು ಕೇವಲ ಮನೋರಂಜನೆಗೆ ಸೀಮಿತವಾಗದೆ ನಮಗೆ ಮಾರ್ಗದರ್ಶನ ಕೂಡಾ ನೀಡುತ್ತಿದ್ದವು. ಹೆಣ್ಣು ಅಬಲೆ ಅಲ್ಲ ಸಬಲೆ ಎಂದು ನಿರೂಪಿಸಿದ 'ಉಡಾನ್' ಧಾರಾವಾಹಿ ಎಷ್ಟೋ ಹೆಣ್ಣು ಮಕ್ಕಳಿಗೆ ದಾರಿದೀಪವಾಗಿತ್ತು. ಗೃಹಿಣಿ ಎಂದರೆ ಉದಾಸೀನ ತೋರಿಸುತ್ತಿದ್ದ ಸಮಾಜಕ್ಕೆ ಗೃಹಿಣಿಯ ಪ್ರಾಮುಖ್ಯತೆ ತಿಳಿಸಿಕೊಟ್ಟ ಧಾರಾವಾಹಿ 'ರಜನಿ.' ಇಂದು ಅತ್ತೆ ಸೊಸೆ ಜಗಳ ಹಾಗೂ ದ್ವೇಷ ಸಾಧಿಸುವ ಕಥಾವಸ್ತುವನ್ನು ಇಂದಿನ ಬಹುತೇಕ ಧಾರಾವಾಹಿಗಳು ಹೊಂದಿವೆ. ಅಂದು ಭಿನ್ನಾಭಿಪ್ರಾಯಗಳ ನಡುವೆಯೂ ಹೊಂದಿಕೊಂಡು ಹೋಗುವುದು ಹೇಗೆ ಎಂದು ಹೇಳಿಕೊಟ್ಟ ಧಾರಾವಾಹಿ 'ಶ್ರೀಮಾನ್ ಶ್ರೀಮತಿ.' ಕನಸುಗಳನ್ನು ನನಸಾಗಿಸಲು ಹೋರಾಡಬೇಕೆಂದು ಪ್ರೇರೇಪಿಸಿ ಧಾರಾವಾಹಿ 'ಬಿಸಿಲುಗುದುರೆ.'

ಇಷ್ಟಲ್ಲದೆ ನಮ್ಮ ಪುರಾಣದ ಪರಿಚಯ ಮಾಡಿಕೊಟ್ಟ 'ರಾಮಾಯಣ ಹಾಗೂ ಮಹಾಭಾರತ.' ನಮಗೆ ತಿಳಿದಿರದ ಹಲವು ವಿಷಯಗಳ ಬಂಡಾರವನ್ನೇ ತೆರೆದಿಟ್ಟ 'ಸುರಭಿ.' ಮಕ್ಕಳೊಡನೆ ದೊಡ್ಡವರು ಕಾದು ನೋಡುತ್ತಿದ್ದ 'ಮಾಲ್ಗುಡಿ ಡೇಸ್' ಹಾಗೂ 'ವಿಕ್ರಮ್ ಮತ್ತು ಬೇತಾಳ್.' ಹೇಳುತ್ತ ಹೋದರೆ ಮುಗಿಯದ ಪಟ್ಟಿ. ಎಷ್ಟು ಸುಂದರವಾಗಿತ್ತು ನಮ್ಮ ಬಾಲ್ಯದ ಕಾಲ.

—ಶಾಲಿನಿ ಮನೋಹರ್, ಬೆಂಗಳೂರು

## ಊಹೆಗೂ ನಿಲುಕದ್ದು...

ಕನ್ನಡ ಕಲರ್ಸ್‌ನ 'ಮೂರೂ ಗಂಟು' ಕಂಡರಿಯದ ಕಥೆ ಎಂದರೆ ತಪ್ಪಲ್ಲ. ಎಷ್ಟೋ ರಿಯಾಲಿಟಿ ಶೋಗಳನ್ನು ನೋಡಿದ್ದೇವೆ. ಆದರೆ ಕೊನೆಯಲ್ಲಿ ವಿಜೇತ/ವಿಜೇತೆ ಎಂಬುದು ಇರುತ್ತದೆ ಆದರೆ ಕೊನೆಯಲ್ಲಿ ನಾಯಕನಾಗಲಿ ನಾಯಕಿಯಾಗಲಿ ಗೆದ್ದವರನ್ನು ಮದುವೆಯಾಗಬೇಕು ಎಂಬುದು ಎಲ್ಲಿಯೂ ಇಲ್ಲ. ಅಷ್ಟಕ್ಕೂ ಮದುವೆ ಮಾಡಲು ಕಾರ್ಯಕ್ರಮ ನಡೆಸಿಕೊಡುವವರು ಯಾರು ಎಂಬುದು ಮುಖ್ಯ ಇದು ನಿಜಕ್ಕೂ ಅರ್ಥಹೀನ. ಅಲ್ಲದೆ ನಾಯಕನಟ ಯಾವುದೋ ಪ್ರೇಮಪಾಶದಲ್ಲಿ ಸಿಲುಕಿ ಸಂಗಾತಿಯಿಂದ ಮೋಸ ಹೋಗಿ ಶೋನಲ್ಲಿ ವಿಜೇತಳನ್ನು ಅಮಾನುಷವಾಗಿ ನೋಡುವುದು ತೀರ ಬಾಲಿಶ. ಇದೊಂದು ಅರ್ಥರಹಿತ ಧಾರಾವಾಹಿ.

—ಎನ್.ಎಸ್. ಚಂದ್ರಶೇಖರ್ ಬೆಂಗಳೂರು

## ಪದಸಂಪತ್ತು ಮರೆ

ಟೀವಿ ಧಾರಾವಾಹಿಗಳಲ್ಲಿ ಕನ್ನಡ ಪದಗಳು 'ಆತಂಕ' 'ಯೋಚನೆ' 'ಬೇಜಾರು' ಪದಗಳಿಗೆಲ್ಲಾ ಒಂದೇ ಇಂಗ್ಲಿಷ್ ಪದ 'ಟೆನ್ಷನ್' ಆಕ್ರಮಿಸಿಕೊಂಡು ಬೇರೆ ಪದಗಳ ಬಳಕೆ ಕೇಳುತ್ತಲೇ ಇಲ್ಲ. 'ಕೈ ಕಾಲು ಮುಖ ತೊಳೆದುಕೊಂಡು ಬಾ' ಎನ್ನುವುದಕ್ಕೂ 'ಫ್ರೆಶ್ ಅಪ್' ಬಳಕೆ. ಹೀಗಾದರೆ ಕನ್ನಡ ಭಾಷೆ ಬೆಳೆಸುವುದು ಹೇಗೆ? ಬಳಸದೆ ಇದ್ದರೆ! ಈಚೆಗೆ 'ಮಗಳು ಜಾನಕಿ'ನಲ್ಲಿ ರಶ್ಮಿ ಭಾರ್ಗಿ ಜಾನಕಿಗೆ ಮುಖ ತೊಳೆದುಕೊಂಡು ಬಾ ಎಂದದ್ದು ಕೇಳಿ ತುಂಬಾ ಸಂತೋಷವಾಯಿತು.

—ಸೀತಾ ಕೇಶವ, ಸಿಡ್ನಿ

## ಚಂದನವೂ ಬದಲಾಗಲಿ

ಕೊರೊನಾ ಕಾರಣದಿಂದ ಮನೆಯಲ್ಲೇ ಕಾಲಕಳೆಯಲು ದೂರದರ್ಶನ ರಾಮಾಯಣ–ಮಹಾಭಾರತ ಹಳೆಯ ಧಾರವಾಹಿಗಳನ್ನು ಪ್ರಸಾರ ಮಾಡುತ್ತಿದೆ. ಅದೇ ರೀತಿ ನಮ್ಮ ಚಂದನದವರೂ ಹಳೆಯ ಜನಪ್ರಿಯ ಧಾರಾವಾಹಿಗಳಾದ 'ಗುಡ್ಡದ ಭೂತ, ಮನ್ವಂತರ , ಮಾಯಾಮೃಗ, ಕ್ರೇಜಿ ಕರ್ನಲ್' ಗಳನ್ನು ಪ್ರಸಾರ ಮಾಡಿದರೆ ಮತ್ತೊಮ್ಮೆ ನೋಡಬಹುದು.

—ಪಾರಂಪಳ್ಳಿ ವಸಂತಿ